# ಪತ್ರಿಕಾ ಪ್ರಕಟಣೆ

## ಡಾ: ಬಿ.ಆರ್.ಅಂಬೇಡ್ಕರ್ ಅವರ ಅಪರೂಪದ ಚಿತ್ರಗಳನ್ನೊಳಗೊಂಡ ಕ್ಯಾಲೇಂಡರ್ ಬಿಡುಗಡೆ ಆಧುನೀಕರಣ ದತ್ತ ದಾಪುಗಾಲು ಇಟ್ಟ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

- ಒಂದು ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿಗೆ ಆನ್‌ಲೈನ್ ಮುಖಾಂತರ ಹಣ ವರ್ಗಾವಣೆ.
- ಪ್ರತಿ ಹಂತದ ಮಾಹಿತಿಯೂ ಫಲಾನುಭವಿಗಳ ಬೆರಳ ತುದಿಯಲ್ಲಿ ಲಭ್ಯ.




ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರದ ಸಮಾಜಕಲ್ಯಾಣ ಇಲಾಖೆ ಅಧೀನದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಾ. ಬಿ.ಆರ್.ಅಂಬೇಡ್ಕರ್ ಅವರ ಅಪರೂಪದ ಛಾಯಾ ಚಿತ್ರಗಳನ್ನೊಳಗೊಂಡಿರುವ ಕ್ಯಾಲೆಂಡರ್‌ನ್ನು ಹೊರತಂದಿದ್ದು, ರಾಜ್ಯದಲ್ಲಿ ಇಂತಹ ಪ್ರಯತ್ನ ಇದು ಮೊದಲಾಗಿದೆ ಎಂದು ನಿಗಮದಅಧ್ಯಕ್ಷರಾದಶ್ರೀ. ಎಂ.ಎಸ್.ಬಸವರಾಜುರವರು ಹೇಳಿದರು.

ನಗರದದಲ್ಲಿಂದು 2018 ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದಅವರು, ಡಾ. ಬಿ.ಆರ್.ಅಂಬೇಡ್ಕರ್ಅಭಿವೃದ್ಧಿ ನಿಗಮ ಸಂಪೂರ್ಣ ಡಿಜಿಟಲೀಕರಣದ ಮೂಲಕ ಆಧುನೀಕರಣ ದತ್ತ ದಾಪುಗಾಲು ಇಟ್ಟಿದೆ. ಕೇವಲ ಆಧುನೀಕರಣದತ್ತ ಹೆಜ್ಜೆ ಇಟ್ಟಿರುವುದು ಮಾತ್ರವಲ್ಲದೇ, ಸಾಧನೆಯ ಹಾದಿಯಲ್ಲಿ ಮಹತ್ವದ ಮೈಲುಗಲ್ಲು ಸ್ಥಾಪಿಸಿದೆ ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನದ ಪ್ರಮುಖ ಘಟ್ಟಗಳನ್ನು ಪ್ರತಿಬಿಂಬಿಸುವಂತಹ ಅಪರೂಪದ ಛಾಯಾಚಿತ್ರಗಳನ್ನು ದೆಹಲಿಯಿಂದ ಸಂಗ್ರಹಿಸಲಾಗಿದೆ. ಇವುಗಳನ್ನು ಪ್ರಕಟಿಸುವಂತಹ ಮೊದಲ ಪ್ರಯತ್ನ ನಿಗಮದ್ದಾಗಿದ್ದು, ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನದ ಪ್ರಮುಖ ಘಟ್ಟಗಳನ್ನು ರಾಜ್ಯದ ಜನರಿಗೆ ಪರಿಚಯಿಸುವ ಕೆಲಸ ನಮ್ಮದಾಗಿದೆ ಎಂದರು.

ನಂತರ ನಿಗಮದ ಕಳೆದೆರೆಡು ವರ್ಷಗಳಲ್ಲಿ ಸಾಧಿಸಿದ ಸಾಧನೆಯ ಬಗ್ಗೆ ಮಾಹಿತಿ ನೀಡಿದ ಅವರು, ಇದುವರೆಗೆ ನಮ್ಮ ನಿಗಮದ ಯೋಜನೆಗಳು, ಕಾರ್ಯಕ್ರಮಗಳು ಸೇರಿದಂತೆ ಮತ್ತಿತರೆ ಮಾಹಿತಿಗಳಿಗಾಗಿ ಸಾರ್ವಜನಿಕರು ತಡಕಾಡಬೇಕಿತ್ತು. ಆದರೆ, ಈಗ ನಿಗಮದ ವೆಬ್‌ಸೈಟ್‌ಗೆ ಭೇಟಿ ನೀಡಿದಾಕ್ಷಣ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಎಲ್ಲಾ ಮಾಹಿತಿಗಳು ಲಭ್ಯವಾಗುವಂತೆ ಮಾಡಲಾಗಿದೆ ಎಂದರು.




ಸಾರ್ವಜನಿಕರಿಗೆ ಬೆರಳತುದಿಯಲ್ಲೇ ನಿಗಮದ ಎಲ್ಲಾ ಮಾಹಿತಿಗಳನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದ ಕಲ್ಯಾಣ ಮೊಬೈಲ್ ಆ್ಯಪ್ ಅನ್ನೂ ಸಹ ಪರಿಚಯಿಸಲಾಗಿದೆ. ಈ ಮೂಲಕ ನಿಗಮದ ಯೋಜನೆಗಳ ಪ್ರಯೋಜನ ಪಡೆಯುವಂತಹ ಆಕಾಂಕ್ಷಿಗಳು ತಮ್ಮ ಮೊಬೈಲ್‌ನಲ್ಲಿಯೇ ಆ್ಯಪ್ ಮೂಲಕ ಎಲ್ಲಾ ಮಾಹಿತಿಗಳು, ಯೋಜನೆಗಳ ಅಂಕಿ ಅಂಶಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರನ್ನು ಬಡತನ ರೇಖೆಗಿಂತ ಮೇಲಕ್ಕೆ ತರುವ ನಿಟ್ಟಿನಲ್ಲಿ ಈ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವನ್ನು 1975 ರಲ್ಲಿಆರಂಭ ಮಾಡಲಾಯಿತು. ಅಂದಿನಿಂದ ಹತ್ತು ಹಲವು ಆಯಾಮಗಳನ್ನು ಕಾಣುತ್ತಾ ಬಂದಿರುವ ನಿಗಮ ನೂರಾರು ಯೋಜನೆಗಳನ್ನು ಲಕ್ಷಾಂತರಜನರಿಗೆ ನೀಡಿದೆ. ಇದೇ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಾ ಬಂದಿರುವ ನಿಗಮ ಕಳೆದ ಒಂದೂವರೆ ವರ್ಷದಲ್ಲಿತನ್ನ ವೇಗವನ್ನು ಹೆಚ್ಚಿಸಿಕೊಂಡಿದೆ. ಈ ಮೂಲಕ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಹಲವು ಪಟ್ಟು ಹೆಚ್ಚು ಪ್ರಗತಿ ಸಾಧಿಸಿದೆ ಎಂದು ಹೇಳಿದರು.

2013–14ನೇ ಸಾಲಿನಿಂದ 2017–18ನೇ ಸಾಲಿನವರೆಗೆ ರೂ. 2159.80 ಕೋಟಿಗಳನ್ನು ಒದಗಿಸಲಾಗಿದ್ದು, ಇದರ ಪೈಕಿ 2017–ಡಿಸೆಂಬರ್‌ವರೆಗೆ ರೂ. 1922.65 ಕೋಟಿ ಸಹಾಯಧನವಾಗಿ ಮತ್ತು ರೂ. 391.18 ಕೋಟಿಗಳ ಬ್ಯಾಂಕ್ ಸಾಲ ಪಡೆದು ಒಟ್ಟಾರೆ ರೂ. 2313.83 ಕೋಟಿಗಳಲ್ಲಿ ಸಹಾಯಧನ/ ಸಾಲ ಸೌಲಭ್ಯ ಕಲ್ಪಿಸಲಾಗಿದೆ.

**ಭೂ ಒಡೆತನ ಯೋಜನೆಯಡಿ:–** ಭೂ ರಹಿತ ಕೃಷಿ ಕಾರ್ಮಿಕರಿಗೆ ಮಹಿಳೆಯರ ಹೆಸರಿನಲ್ಲಿ ಘಟಕ ವೆಚ್ಚವನ್ನು ಹಂತ–ಹಂತವಾಗಿ ಹೆಚ್ಚಿಸಿ, ಪ್ರಸ್ತುತ ರೂ. 15 ಲಕ್ಷ ನಿಗದಿಪಡಿಸಲಾಗಿದೆ. ಈ ಪೈಕಿ 50 ರಷ್ಟು ಸಾಲ ಮತ್ತು 50 ರಷ್ಟು ಸಹಾಯಧನ ನೀಡಲಾಗುತ್ತಿದೆ. ಒಟ್ಟು ಘಟಕ ವೆಚ್ಚವನ್ನು ನಿಗಮವೇ ಭರಿಸುವುದು.

ಪ್ರಸಕ್ತ ಸರ್ಕಾರದ ಅವಧಿಯಲ್ಲಿ 4327 ಫಲಾನುಭವಿಗಳಿಗೆ 277.18 ಕೋಟಿಗಳ ವೆಚ್ಚದಲ್ಲಿ 5798 ಎಕರೆ ಜಮೀನು ಖರೀದಿಸಿ ನೀಡಲಾಗಿದೆ.

**ಗಂಗಾ ಕಲ್ಯಾಣ ಯೋಜನೆ :–**ಈ ಯೋಜನೆಯಡಿಲ್ಲಿ ಪರಿಶಿಷ್ಟ ಜಾತಿಯ ರೈತರಿಗೆ ಕೊಳವೆ ಬಾವಿಗಳ ಕೊರೆಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ನಿಗಮದಿಂದಲೇ ಸಹಾಯಧನ ಮತ್ತು ಸಾಲ ನೀಡಿ, ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತದೆ.

ಪ್ರಸಕ್ತ ಸರ್ಕಾರದ ಅವಧಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕಳೆದ 2013–14 ರಿಂದ 2017–18ನೇ ಸಾಲಿನವರೆಗೆ 721.09 ಕೋಟಿ ವೆಚ್ಚ ಮಾಡಿ, 35584 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಅದರ ಪೈಕಿ 30060 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಅಲ್ಲದೆ 2570 ಫಲಾನುಭವಿಗಳಿಗೆ ಸಾಮೂಹಿಕ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

**ಉದ್ಯಮ ಶೀಲತಾ ಯೋಜನೆ/ ಸ್ವಯಂ ಉದ್ಯೋಗ ಯೋಜನೆ:–** ಕಳೆದ 2013–14 ರಿಂದ 2017–18ನೇ ಸಾಲಿನವರೆಗೆ 364.26 ಕೋಟಿ ವೆಚ್ಚ ಮಾಡಿ, 6973 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ. ಘಟಕ ರೂ. 1 ಲಕ್ಷದ ಒಳಗೆ ಇರುವ ಸ್ವಯಂ ಉದ್ಯೋಗ ಚಟುವಟಿಕೆಗಳಲ್ಲಿ ಮೇಲ್ಕಂಡ ಅವಧಿಯಲ್ಲಿ 249.29 ಕೋಟಿಗಳನ್ನು ವೆಚ್ಚ ಮಾಡಿ, 29148 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ.

**ಮೈಕ್ರೋ ಕ್ರೆಡಿಟ್/ ಕಿರುಸಾಲ ಯೋಜನೆ:–** ಕಳೆದ 2013–14 ರಿಂದ 2017–18ನೇ ಸಾಲಿನವರೆಗೆ 905.38 ಕೋಟಿ ವೆಚ್ಚ ಮಾಡಿ, 121722 ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ನೀಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ ನಿರುದ್ಯೋಗಿ ಯುವಕ–ಯುವತಿಯವರಿಗೆ ಸ್ವಯಂ ಉದ್ಯೋಗ ಕಲ್ಪಿಸಲು ವಿಶೇಷವಾಗಿ ಪ್ರವಾಸಿ ಟ್ಯಾಕ್ಸಿಗಳನ್ನು ನೀಡಲಾಗುತ್ತದೆ. ಪ್ರತಿ ಫಲಾನುಭವಿಗಳಿಗೆ ರೂ. 3 ಲಕ್ಷ ಸಹಾಯಧನ ನೀಡಲಾಗುತ್ತದೆ. ಒಟ್ಟು 3500 ಫಲಾನುಭವಿಗಳಿಗೆ ಈ ಸೌಲಭ್ಯ ಒದಗಿಸಲಾಗುವುದು.

## ಆಧುನೀಕರಣದತ್ತದಾಪುಗಾಲು




ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀನಿವಾಸುಲು ಮಾತನಾಡಿ, ಅಂಬೇಡ್ಕರ್ ಅಭಿವೃದ್ಧಿ ನಿಗಮ ಆಧುನೀಕರಣದತ್ತ ದಾಪುಗಾಲು ಇಟ್ಟಿದೆ. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅಂತರ್ಜಾಲ ಮಾಧ್ಯಮವನ್ನು ಬಳಸಿಕೊಂಡು ನಿಗಮದ ಕಾರ್ಯಾವೈಖರಿಗೆ ಹೊಸ ಸ್ವರೂಪ ಹಾಗೂ ವೇಗವನ್ನು ನೀಡುವಜೊತೆಗೆ ಯೋಜನೆಗಳ ಅನುಷ್ಠಾನದಲ್ಲಿ ಆಗುತ್ತಿರುವ ಅನಗತ್ಯ ವಿಳಂಬವನ್ನು ತಪ್ಪಿಸಲು ಕ್ರಮಕೈಗೊಂಡಿದೆ. ಇದರಿಂದ ಯೋಜನೆಗಳ ಮಂಜೂರಾತಿ, ಫಲಾನುಭವಿಗಳ ಖಾತೆಗೆ ನೇರವಾಗಿ ಹಣಜಮಾವಣೆ ಹಾಗೂ ಫಲಾನುಭವಿಗಳಿಗೆ ಎಲ್ಲಾ ಹಂತದಲ್ಲೂ ಮಾಹಿತಿ ನೀಡುವ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಕ್ರಮದಿಂದ ಯೋಜನೆಗಳ ಮಂಜೂರಾತಿ, ಫಲಾನುಭವಿಗಳ ಖಾತೆಗೆ ನೇರವಾಗಿ ಹಣಜಮಾವಣೆ ಹಾಗೂ ಫಲಾನುಭವಿಗಳಿಗೆ ಎಲ್ಲಾ ಹಂತದಲ್ಲೂ ಮಾಹಿತಿ ನೀಡುವ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಹಾಗೂ ಇಲಾಖೆಯು ಯೋಜನೆಗಳ ಲಾಭವನ್ನು ಪಡೆದವರೆ ಪಡೆಯುವುದನ್ನು ತಪ್ಪಿಸಲು ಫಲಾನುಭವಿಯ ಆಧಾರ್ ಸಂಖ್ಯೆಯನ್ನು ಮಂಜೂರಾದ ಯೋಜನೆಗಳಿಗೆ ಜೊಡಿಸುವ ಪ್ರಕ್ರಿಯೆ ಆರಂಭಮಾಡಲಾಗಿದೆ.




ಇದುವರೆಗಿನ ವ್ಯವಸ್ಥೆಯಲ್ಲಿ ನಿಗಮದ ಯೋಜನೆಗಳ ಫಲಾನುಭವಿಗಳು ಶಾಸಕರ ಕಛೇರಿ, ಜಿಲ್ಲಾ ಕಛೇರಿ, ಬ್ಯಾಂಕ್ ಹಾಗೂ ಕೇಂದ್ರ ಕಛೇರಿಗೆ ಪದೇ ಪದೇ ಅಲೆದಾಡಬೇಕಾದ ಸ್ಥಿತಿಇದೆ ಇದರಿಂದ ಫಲಾಪೇಕ್ಷಿಗೆ ಸಾಕಷ್ಟು ತೊಂದರೆ ಹಾಗೂ ವಿಳಂಬ ಆಗುತ್ತಿದೆ. ಇದನ್ನು ತಪ್ಪಿಸಲು ಆನ್‌ಲೈನ್ ವ್ಯವಸ್ಥೆಯ ಪಾರದರ್ಶಕ ಮಾಹಿತಿ ನೀಡುವ ಕ್ರಮಕೈಗೊಳ್ಳಲಾಗಿದೆ.

ಜಿಲ್ಲಾ ಕಚೇರಿಗಳ ಯೋಜನೆಗಳ ಅನುಷ್ಠಾನ ಮಾಹಿತಿಯನ್ನು ಕಂಪ್ಯೂಟರಿಕರಣಗೊಳಿಸಿ ಆಧಾರ್ ನಂಬರ್ ಮೂಲಕ ಅರ್ಜಿದಾರರ ಸೀಡಿಂಗ್ ಪರಿಶೀಲಿಸಿ ಅರ್ಜಿದಾರರಿಗೆ ಹಾಗೂ ಸಂಬಂಧ ಪಟ್ಟ ಬ್ಯಾಂಕಿಗೆ ಹಣ ಪಾವತಿ ಮಾಡಲಾಗುವುದು. ಹಾಗೆಯೇ ಅರ್ಜಿದಾರರಿಗೆ, ಎಸ್.ಎಂ.ಎಸ್ ಮೂಲಕ ಹಣ ರವಾನೆ ಆದ ಬಗ್ಗೆ ಮಾಹಿತಿ ನೀಡಲಾಗುವುದು. ಸಾರ್ವಜನಿಕರು ಇದುವರೆಗೆ ಯೋಜನೆಗಳ ನೆರವಿಗಾಗಿ ಅರ್ಜಿ ಸಲ್ಲಿಸಿ ಅದರ ಫಾಲೋ ಅಪ್‌ಗಾಗಿ ನಿಗಮದ ಕಚೇರಿಗೆ ಹಲವು ಬಾರಿ ಬಂದು ಹೋಗಬೇಕಿತ್ತು. ಇದಕ್ಕಾಗಿ ಅವರ ಸಮಯ, ಹಣ ವ್ಯರ್ಥವಾಗುತ್ತಿತ್ತು. ಈ ಸಮಸ್ಯೆಯನ್ನು ಹೋಗಲಾಡಿಸಲೆಂದು ನಿಗಮವು ಸ್ಪಂದನೆ ಎಂಬ ಮೊಬೈಲ್ ಅಪ್ಲಿಕೇಶನ್‌ಅನ್ನು ಅಭಿವೃದ್ಧಿಪಡಿಸಿದೆ. ಇದು ಗ್ರಾಹಕ ಸ್ನೇಹಿ ಆ್ಯಪ್ ಆಗಿದ್ದು, ಫಲಾನುಭವಿಗಳು ಸಲ್ಲಿಸಿರುವ ಅರ್ಜಿಗಳ ಸ್ಥಿತಿಗತಿಯನ್ನು ಈ ಆ್ಯಪ್ ಮೂಲಕ ಕ್ಷಣಾರ್ಧದಲ್ಲಿ ತಿಳಿದುಕೊಳ್ಳಬಹುದಾಗಿದೆ. ಈ ಮೂಲಕ ಅವರಿಗೆ ತಡೆರಹಿತ ಸೇವೆಗಳು ಲಭ್ಯವಾಗುವಂತೆ ಮಾಡಲಾಗಿದೆ.




ಇದಲ್ಲದೇ, ಅರ್ಜಿಯ ಸ್ಥಿತಿಗತಿ ಸೇರಿದಂತೆ ಮತ್ತಿತರೆ ಮಾಹಿತಿಗಳನ್ನು ಈ **ಸ್ಪಂದನೆ** ಸಾಫ್ಟ್‌ವೇರ್ ಮೂಲಕ ಅರ್ಜಿದಾರರ ಮೊಬೈಲ್‌ಗೆ ಎಸ್‌ಎಂಎಸ್ ಸಂದೇಶವನ್ನು ಕಳುಹಿಸಲಾಗುತ್ತದೆ. ಈ ಸ್ಪಂದನೆ ಆ್ಯಪ್‌ನಲ್ಲಿ ನೀಡುವ ದೂರುಗಳನ್ನು ಕೂಡಲೇ ಸಂಬಂಧಿಸಿದ ವಿಭಾಗಕ್ಕೆ ರವಾನಿಸಿ ಅದಕ್ಕೆ ಪರಿಹಾರವನ್ನೂ ಒದಗಿಸಲಾಗುತ್ತದೆ. ಈ ಬಗ್ಗೆ ದೂರುದಾರರಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುತ್ತದೆ. ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿ ಮಾಡಿತಮ್ಮ ಸಮಸ್ಯೆಗಳನ್ನು ಹೇಳಿಕೊಂಡರೆ ಕೂಡಲೇ ಆ ಸಮಸ್ಯೆ ಮತ್ತು ಪರಿಹಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅಡಕ ಮಾಡಲಾಗುತ್ತದೆ. ಈ ಆ್ಯಪ್‌ನಿಂದಾಗಿ ಸಾರ್ವಜನಿಕರು ಹಲವು ಬಾರಿ ನಿಗಮದ ಕಚೇರಿಗೆ ಬಂದು ಹೋಗುವ ಗೊಡವೆಯೇ ಇರುವುದಿಲ್ಲ.






**ಇ–ವರದಿ** ಕೈಗಾರಿಕೆ ಮತ್ತು ತರಬೇತಿಗಳಿಗೆ ಸಂಬಂಧಿಸಿದಂತೆ ಇ–ವರದಿ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರೊಗ್ರೆಸ್‌ರಿಪೋರ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಸಾಫ್ಟ್‌ವೇರ್ (ಇ–ವರದಿ) ಕೈಗಾರಿಕೆ ಮತ್ತು ತರಬೇತಿಗಳಿಗೆ ಸಂಬಂಧಿಸಿದಂತೆ ಪ್ರತಿ ತಿಂಗಳು ಜಿಲ್ಲಾ ಮಟ್ಟದಿಂದ ಬರುವ ಅಂಕಿಅಂಶಗಳು ಮತ್ತು ವರದಿಗಳನ್ನು ಸಾರ್ವಜನಿಕರಿಗೆ ತಿಳಿಸುವ ಸಲುವಾಗಿ ಈ ಸಾಫ್ಟ್‌ವೇರ್‌ಅನ್ನುಅಭಿವೃದ್ಧಿಪಡಿಸಲಾಗಿದೆ.

ಅದೇ ರೀತಿ **ಗಂಗಾ ಕಲ್ಯಾಣ ಯೋಜನೆ**ಯ ಕುರಿತು ಸಹ ಈ ಇ–ವರದಿಯಲ್ಲಿ ಎಲ್ಲಾ ಮಾಹಿತಿಗಳನ್ನು ಲಭ್ಯವಾಗುವಂತೆ ಮಾಡಲಾಗಿದೆ. ಇದರೊಂದಿಗೆ ಕಲ್ಯಾಣ ಎಂಬ ಆ್ಯಪ್ ಅನ್ನೂ ಸಹ ಅಭಿವೃದ್ಧಿಪಡಿಸಲಾಗಿದ್ದು, ಗಂಗಾ ಕಲ್ಯಾಣ ಯೋಜನೆ ಬಗ್ಗೆ ಎಲ್ಲಾ ಮಾಹಿತಿಗಳನ್ನು ಈ ಆ್ಯಪ್‌ನಲ್ಲಿ ಪಡೆದುಕೊಳ್ಳಬಹುದಾಗಿದೆ. ಇದರಲ್ಲಿ ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕೆಆರ್‌ಐಇಎಸ್, ಲಿಡ್ಕರ್, ಪಿಇಟಿಸಿ, ಕೆಎಂವಿಎಸ್‌ಟಿಡಿಸಿ ಸೇರಿದಂತೆ ನ್ನಿತರೆ ಯೋಜನೆಗಳ ಸಂಪೂರ್ಣ ಮಾಹಿತಿಗಳನ್ನು ಈ ಕಲ್ಯಾಣ ಆ್ಯಪ್‌ನಲ್ಲಿ ಪಡೆಯಬಹುದಾಗಿದೆ.



ಫಲಾನುಭವಿಗಳು ಆನ್‌ಲೈನ್‌ನಲ್ಲಿ ತಮ್ಮ ಆಧಾರ್ ಕಾರ್ಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಕ್ಷಣಾರ್ಧದಲ್ಲಿ ತಮಗೆ ಬೇಕಾದ ಯೋಜನೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.ಆಯ್ಕೆಯಾದ ಅರ್ಹ ಫಲಾನುಭವಿಗಳಿಗೆ ಆಧಾರ್ ಲಿಂಕ್ ಮಾಡಿದ ಬ್ಯಾಂಕ್‌ಖಾತೆಗೆ ನೇರವಾಗಿ ಅನುದಾನ ಅಥವಾ ಸಹಾಯಧನದ ಹಣವನ್ನು ವರ್ಗಾವಣೆ ಮಾಡಲಾಗುತ್ತದೆ ಎಂದು ಅಧ್ಯಕ್ಷರು ವಿವರಿಸಿದರು.

ಈ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಹಲವು ವಿಧದಲ್ಲಿ ಆಧುನೀಕರಣಗೊಂಡಿದ್ದು, ನೂರಕ್ಕೆ ನೂರರಷ್ಟು ಕಾಗದರಹಿತ ವ್ಯವಹಾರಗಳನ್ನು ನಡೆಸುವತ್ತ ದಿಟ್ಟ ಹೆಜ್ಜೆ ಇಟ್ಟಿದೆಎಂದು ತಿಳಿಸಿದರು.